**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.**

SC. No.08/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ಹೊನ್ನಾಳಿ ಪೊಲೀಸ್ ಠಾಣೆ, ಹೊನ್ನಾಳಿ | | ಎ1) ವೆಂಕಟೇಶ್.ಹೆಚ್.ಪಿ. ಮತ್ತು ಇತರರು |

**ದೋಷಾರೋಪಣೆ**

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ ;-

ಆರೋಪಿತರಾದ -

ಎ1) ವೆಂಕಟೇಶ್.ಹೆಚ್.ಪಿ. ತಂದೆ ಹನುಮಂತಪ್ಪ, ವಯಸ್ಸು 42 ವರ್ಷ,
ಎ2) ಹರೀಶ್.ಹೆಚ್.ಪಿ. ತಂದೆ ಹನುಮಂತಪ್ಪ, ವಯಸ್ಸು 36 ವರ್ಷ,
ಎ3) ಗಿರೀಶ್.ಹೆಚ್. ತಂದೆ ಹನುಮಂತಪ್ಪ, ವಯಸ್ಸು 51 ವರ್ಷ,
ಎ4) ಸುನಂದಮ್ಮ ಕೋಂ ಹನುಮಂತಪ್ಪ, ವಯಸ್ಸು 80 ವರ್ಷ,
ಎ5)ಹನುಮಂತಪ್ಪ ತಂದೆ ದೊಡ್ಡ ಹನುಮಂತಪ್ಪ, ವಯಸ್ಸು 88 ವರ್ಷ, (ಮೃತಪಟ್ಟಿರುತ್ತಾರೆ.)
ಇವರೆಲ್ಲರೂ ವಾಸಃ ಹಿರೇ ಬಾಸೂರು ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
ಎ6) ಶೋಭ ಕೋಂ ದತ್ತಾತ್ರಿ.ಟಿ., ವಯಸ್ಸು 34 ವರ್ಷ, ವಾಸಃ ನಂ.4, ಸ್ಮೃತಿ ನಿಲಯ, 2 ನೇ ಮೇನ್ ರಸ್ತೆ, ಕೃಷಿ ನಗರ, ದಾವಣಗೆರೆ.
ಎ7) ಹಾಲೇಶ.ಹೆಚ್.ಕೆ. ತಂದೆ ಕೃಷ್ಣಪ್ಪ, ವಯಸ್ಸು 38 ವರ್ಷ, ವಾಸಃ ರುದ್ರಮ್ಮ ನಿಲಯ, ರಾಘವೇಂದ್ರ ಸ್ವಾಮಿ ಮಠ, ಟಿ.ಎಂ.ರಸ್ತೆ, ಹೊನ್ನಾಳಿ ಟೌನ್, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ಮೃತೆ ಶ್ವೇತಾಳು ಸಾಕ್ಷಿ-1 ರವರ ತಂಗಿಯಾಗಿದ್ದು, ಸಾಕ್ಷಿ-6 ಮತ್ತು 7 ರವರ ಮಗಳಾಗಿದ್ದು, ಸಾಕ್ಷಿ-6 ಮತ್ತು 7 ರವರು ತಮ್ಮ ಮಗಳಾದ ಶ್ವೇತಾಳನ್ನು ಹೊನ್ನಾಳಿ ತಾಲ್ಲೂಕು, ಹಿರೇಬಾಸೂರು ಗ್ರಾಮದ ವಾಸಿಯಾದ 1 ನೇ ಆರೋಪಿಯಾದ ನಿನಗೆ ಕೊಟ್ಟು ಮದುವೆ ಮಾಡಲು ನಿಶ್ಚಯಿಸಿ, 1 ರಿಂದ 4 ಆರೋಪಿತರಾದ ನೀವು ಮೃತ 5 ನೇ

ಆರೋಪಿತನ ಜೊತೆ ನಿಮ್ಮ ಮನೆಯಲ್ಲಿ ಸಾಕ್ಷಿ-6 ಮತ್ತು 16 ರಿಂದ 22 ರವರು ಮದುವೆ ಮಾತುಕತೆ ಮಾಡಿದ್ದು, ಮಾತುಕತೆಯಲ್ಲಿ 1 ರಿಂದ 4 ಮತ್ತು 6 ನೇ ಆರೋಪಿತರಾದ ನೀವು ಮೃತ 5 ನೇ ಆರೋಪಿತನ ಜೊತೆ ಸೇರಿ ವರದಕ್ಷಿಣೆ ಬೇಡಿಕೆಯನ್ನು ಇಟ್ಟಿದ್ದರಿಂದ ಮಾತುಕತೆ ಮಾಡಿದ ಸಾಕ್ಷಿ-16 ರಿಂದ 22 ರವರು ವರದಕ್ಷಿಣೆ ವಿಚಾರ ಬೇಡ, ಆದರೆ ಮರ್ಯಾದೆಗೆ ಧಕ್ಕೆಯಾಗದಂತೆ ಮದುವೆ ಕಾರ್ಯಕ್ರಮ ನಡೆಸುವಂತೆ ಹೇಳಿದ್ದು, ಆದರೂ ಕೂಡ 1 ರಿಂದ 4 ಮತ್ತು 6 ನೇ ಆರೋಪಿತರಾದ ನೀವು ಮೃತ 5 ನೇ ಆರೋಪಿತನ ಜೊತೆ ಸೇರಿ ವರದಕ್ಷಿಣೆ ಬೇಡಿಕೆ ಇಟ್ಟಿದ್ದರಿಂದ ಮದುವೆ ಮಾತುಕತೆಗೆ ಕುಳಿತಿದ್ದ ಸಾಕ್ಷಿ-16 ರಿಂದ 22 ರವರು ಮಾತುಕತೆ ಮಾಡಿ 4 1/2 ತೊಲದ ಬಂಗಾರದ ಮಾಂಗಲ್ಯ ಸರ, ಎರಡು ತೊಲದ ಗಣಪತಿ ಡಾಲರ್ ಇರುವ ಬಂಗಾರದ ಸರ, 5 1/2 ತೊಲದ ಬೆಳ್ಳಿಯ ಒಂದು ಜೊತೆ ಕಾಲು ಚೈನು, 70,000-00 ರೂಪಾಯಿ ಹಣವನ್ನು ವರಿದಕ್ಷಿಣೆಯಾಗಿ ನೀಡಬೇಕು ಹಾಗೂ ಛತ್ರದಲ್ಲಿ ದಿಃ 14/05/2020 ರಂದು ಮದುವೆ ಮಾಡಿಕೊಡಬೇಕು ಅಂತಾ ತೀರ್ಮಾನ ಮಾಡಿದ್ದು ಅದರಂತೆ ಸಾಕ್ಷಿ-1 ಮತ್ತು 6 ರವರು ತಮ್ಮ ಜಮೀನಿನಿಂದ ಬಂದ ಆದಾಯದಿಂದ ಕೂಡಿಟ್ಟ ಹಣದಲ್ಲಿ 70,000-00 ರೂಪಾಯಿ ಹಣವನ್ನು ಸಾಕ್ಷಿ-1 ಮತ್ತು 6 ರವರು ಹಿರೇಬಾಸೂರು ಗ್ರಾಮಕ್ಕೆ ಹೋಗಿ 1, 4 ನೇ ಆರೋಪಿತರಾದ ನಿಮ್ಮ ಹಾಗೂ ಮೃತ 5 ನೇ ಆರೋಪಿತನ ಕಡೆ ಕೊಟ್ಟಿದ್ದು, ಮಗಳ ಮದುವೆಗಾಗಿ ಒಡವೆಗಳನ್ನು ನ್ಯಾಮತಿ ಟೌನ್‌ನ ಶ್ರೀ ಮಾರುತಿ ಜ್ಯೂಯಲರ್ಸ್ ಅಂಗಡಿಯಲ್ಲಿ ಮಾಡಿಸಿ, ಸಾಕ್ಷಿ-1 ಮತ್ತು 6 ರವರು ಛತ್ರಕ್ಕಾಗಿ ಹೊನ್ನಾಳಿ ಮತ್ತು ನ್ಯಾಮತಿಯಲ್ಲಿ ಹುಡುಕಾಡಲಾಗಿ ಈ ವೇಳೆ ಕರೋನ ಖಾಯಿಲೆ ಇದ್ದುದರಿಂದ ಎಲ್ಲಿಯೂ ಛತ್ರಗಳು ಸಿಗದೇ ಇದ್ದು, ಈ ಸಮಯದಲ್ಲಿ ಸರ್ಕಾರವು ಮದುವೆ ಕಾರ್ಯಕ್ರಮಗಳಿಗೆ ಹೆಚ್ಚು ಜನ ಸೇರದಂತೆ ನಿರ್ಬಂಧಿಸಿದ್ದರಿಂದ ಸಾಕ್ಷಿ-1 ಮತ್ತು 6 ರವರು ಮದುವೆಯನ್ನು ಅವರ ಮನೆಯ ಮುಂದೆಯೇ ದಿಃ 14-05-2020 ರಂದು ಮಾಡಿಕೊಟ್ಟು, ಮದುವೆ ದಿನ ಸಾಕ್ಷಿ-6 ರವರು ತಮ್ಮ ಮಗಳಾದ ಶ್ವೇತಾ. ಜಿ.ವಿ. ಇವಳ ಮೈಮೇಲೆ 4 1/2 ತೊಲದ ಬಂಗಾರದ ಮಾಂಗಲ್ಯ ಸರ, 5 1/2 ತೊಲದ ಬೆಳ್ಳಿಯ ಒಂದು ಜೊತೆ ಕಾಲು ಚೈನು ಹಾಕಿ, 1 ನೇ ಆರೋಪಿಯಾದ ನಿನ್ನ ಮೈಮೇಲೆ 2 ತೊಲದ ಗಣಪತಿ ಡಾಲರ್ ಇರುವ ಬಂಗಾರದ ಸರವನ್ನು ಹಾಕಿ ಮದುವೆ ಮಾಡಿಕೊಟ್ಟಿದ್ದು, ಆ ಪ್ರಕಾರ ಕಲಂ 3 ವರದಕ್ಷಿಣೆ ನಿಶೇಧ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಎರಡನೇಯದಾಗಿ, ಮೃತ ಶ್ವೇತಾ ಮದುವೆಯಾಗಿ ಬಂದ ಬಳಿಕ 1 ರಿಂದ 4 ಮತ್ತು 6 ಹಾಗೂ ಅಲ್ಲದೇ 7 ನೇ ಆರೋಪಿತನಾದ ನಿನ್ನ ಪ್ರಚೋದನೆಯ ಮೇರೆಗೆ

ನೀವೆಲ್ಲರುಾ ಮೃತ 5 ನೇ ಆರೋಪಿತನ ಜೊತೆ ಸೇರಿ ಮೃತಳಿಗೆ ಮದುವೆಯಾಗಿ ಬಂದ ನಂತರ ಸ್ವಲ್ಪ ದಿನಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದು, ನಂತರ ತವರು ಮನೆಯಿಂದ 1 ಲಕ್ಷ ರುಾಪಾಯಿ ಹಣವನ್ನು ತೆಗೆದುಕೊಂಡು ಬರುವಂತೆ ಪ್ರತಿದಿನ ಆಕೆಗೆ ಹೊಡೆಯುವುದು, ಬೈಯುವುದು ಹಾಗುಾ ಹಿಂಸೆ ಮಾಡುತ್ತ ಬಂದಿದ್ದು, ಆ ಪ್ರಕಾರ ಕಲಂ.498(ಎ), 114 ಜೊತೆ 34 ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

3. ಮೂರನೇಯದಾಗಿ, ಆರೋಪಿತರಾದ ನೀವೆಲ್ಲರೂ ಮೃತ 5 ನೇ ಆರೋಪಿಯ ಜೊತೆ ಸೇರಿ 7 ನೇ ಆರೋಪಿಯ ಪ್ರಚೋದನೆಯ ಮೇರೆಗೆ ಮೃತಳಿಗೆ ಕೈಗಳಿಂದ ಹಲ್ಲೆ ಮಾಡುತ್ತಿದ್ದು, ಆ ಪ್ರಕಾರ ಕಲಂ 323, 114 ಜೊತೆ 34 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ನಾಲ್ಕನೇಯದಾಗಿ, ಆರೋಪಿತರಾದ ನೀವೆಲ್ಲರೂ ಮೃತ 5 ನೇ ಆರೋಪಿಯ ಜೊತೆ ಸೇರಿ 7 ನೇ ಆರೋಪಿಯ ಪ್ರಚೋದನೆಯ ಮೇರೆಗೆ ಮೃತಳಿಗೆ ಕೈಗಳಿಂದ ಹಲ್ಲೆ ಮಾಡುತ್ತಿದ್ದುದಲ್ಲದೇ, ಆಕೆಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ಆ ಪ್ರಕಾರ ಕಲಂ 504, 114 ಜೊತೆ 34 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

5. ಐದನೇಯದಾಗಿ, ಆರೋಪಿತರಾದ ನೀವೆಲ್ಲರೂ ಮೃತ 5 ನೇ ಆರೋಪಿಯ ಜೊತೆ ಸೇರಿ 7 ನೇ ಆರೋಪಿಯ ಪ್ರಚೋದನೆಯ ಮೇರೆಗೆ ಮೃತಳಿಗೆ ಕೈಗಳಿಂದ ಹಲ್ಲೆ ಮಾಡಿ, ಆಕೆಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದುದಲ್ಲದೇ, ದಿಃ 06-07-2023 ರಂದು ಸಂಜೆ 4-00 ಗಂಟೆ ಸಮಯದಲ್ಲಿ ನಿಮ್ಮಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ಮೃತಳು ಒಳಗಡೆ ಮಲಗಿದ್ದು, ಆಕೆಯ ಮಗ ಓರ್ವನೇ ಹೊರಗಡೆ ಆಡುವುದನ್ನು ನೋಡಿ ಆಕೆಗೆ ಮಗುವಿನ ಕುರಿತಾಗಿ ಕಾಳಜಿ ಇಲ್ಲ, ತವರು ಮನೆಯಿಂದ ವರದಕ್ಷಿಣೆ ಹಣ ಕೂಡ ತರುತ್ತಿಲ್ಲ, ಊಟ ಹಾಕುವುದು ದಂಡ ಎಂದು ಜಗಳವಾಡಿದ್ದು, ಆ ಕಾರಣ ಆಕೆ ಉಪವಾಸವಿದ್ದು, ತದನಂತರ ದಿಃ 08-07-2023 ರಂದು ಮದ್ಯಾಹ್ನ 2-00 ಗಂಟೆಯ ಸಮಯದಲ್ಲಿ 3 ನೇ ಆರೋಪಿಯು ಮನೆಗೆ ಬಂದಿದ್ದು, ಆಗ ನಿಮ್ಮಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಆತನಿಗೆ ವಿಷಯ ಹೇಳಿ ಮೃತನೊಂದಿಗೆ ನೀವು ಜಗಳವಾಡಿದ್ದು, ಆಗ ಮೃತಳು ನಿಮ್ಮಲ್ಲಿ 4 ಮತ್ತು 5 ನೇ ಆರೋಪಿತರು ಮನೆಯಲ್ಲಿ ಏನು ಮಾಡುತ್ತಾರೆ ಎಂದು ಹೇಳಿದ ಕಾರಣ ನಿಮ್ಮಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಮೃತಳು ಬದುಕಿದ್ದರೆ ನೆಮ್ಮದಿ ಇಲ್ಲ ಎಂದು ಅವಳನ್ನು ಹೇಗಾದರೂ ಸಾಯಿಸಿದರೆ 1 ನೇ

ಆರೋಪಿಗೆ ಇನ್ನೊಂದು ಮದುವೆ ಮಾಡಬಹುದು ಎಂದು ಮಾತನಾಡಿಕೊಂಡು ಆಕೆಯನ್ನು ಕೊಲೆ ಮಾಡಿ ಹೊಳೆಯಲ್ಲಿ ಎಸೆದರೆ ಜನ ಆಕೆ ನೀರಿನಲ್ಲಿ ಬಿದ್ದಳು ಎಂದು ತಿಳಿದುಕೊಳ್ಳುತ್ತಾರೆ ಎಂದು ಆಕೆಯನ್ನು ಕೊಲೆ ಮಾಡಲು ಸಂಚು ಮಾಡಿದ್ದು, ಆ ಪ್ರಕಾರ ಕಲಂ 120 ಬಿ ಜೊತೆ 34 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

6. ಆರನೇಯದಾಗಿ, ತದನಂತರ 1 ರಿಂದ 3 ನೇ ಆರೋಪಿತರಾದ ನೀವು ಮಾಡಿದ ಸಂಚಿನಂತೆ ದಿಃ 08-07-2023 ರಂದು ರಾತ್ರಿ 10-00 ಗಂಟೆಯ ಸಮಯದಲ್ಲಿ ಮೃತ ಶ್ವೇತಾಳೊಂದಿಗೆ ಜಗಳ ತೆಗೆದು 1 ನೇ ಆರೋಪಿಯಾದ ನೀನು ಮನೆಯಲ್ಲಿ ಇದ್ದ ಚೂಡಿದಾರದ ಟಾಪನ್ನು ತೆಗೆದುಕೊಂಡು ಮೃತಳೊಂದಿಗೆ ಜಗಳ ಆಡುತ್ತ ಆಕೆಯನ್ನು ಅಡುಗೆ ಕೋಣೆಗೆ ಕರೆದುಕೊಂಡು ಹೋಗಿ ಕಪಾಳಕ್ಕೆ ಹೊಡೆದು, ನಂತರ ಹಿಂದಿನಿಂದ ಚೂಡಿದಾರ ಟಾಪಿನಿಂದ ಅವಳ ಬಾಯಿಗೆ ಮತ್ತು ಮೂಗಿಗೆ ಉಸಿರುಗಟ್ಟುವಂತೆ ಹಿಡಿದಿದ್ದು, ಅಲ್ಲದೇ 2 ಮತ್ತು 3 ನೇ ಆರೋಪಿತರಾದ ನೀವು ಆಕೆ ಒದ್ದಾಡದಂತೆ ಆಕೆಯ ಕೈಕಾಲುಗಳನ್ನು ಹಿಡಿದುಕೊಂಡು ನೆಲಕ್ಕೆ ಮಲಗಿಸಿದ್ದು, ಉಪವಾಸದಿಂದ ನಿತ್ರಾಣಳಾಗಿದ್ದ ಶ್ವೇತಾಳನ್ನು ಉಸಿರುಗಟ್ಟಿಸಿ ಸಾಯಿಸಿದ್ದು, ಆ ಪ್ರಕಾರ ಕಲಂ 302 ಜೊತೆ 34 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

7. ಏಳನೇಯದಾಗಿ, ಆ ರೀತಿ ಕೊಲೆ ಮಾಡಿದ ನಂತರ 1 ರಿಂದ 3 ನೇ ಆರೋಪಿತರಾದ ನೀವು ಸಾಕ್ಷ್ಯವನ್ನು ನಾಶ ಮಾಡುವ ಉದ್ದೇಶದಿಂದ ಆಕೆಯ ಮೃತ ದೇಹವನ್ನು ಕೇರಿಯಲ್ಲಿ ಯಾರು ಇಲ್ಲದ ಸಮಯ ನೋಡಿಕೊಂಡು ಬೆಳಗಿನ ಜಾವ 3-00 ಗಂಟೆಗೆ ನಿಮ್ಮ ಬಾಬ್ತು ವ್ಯಾಗ್ನರ್ ಕಾರ್ ನಂ.ಕೆಎ-34-ಎಂ-7178 ರಲ್ಲಿ ಆಕೆಯ ಶವವನ್ನು ಹಾಕಿಕೊಂಡು ಹಿರೇಬಾಸೂರು ಗ್ರಾಮದ ತುಂಗಭದ್ರಾ ನದಿಯಲ್ಲಿ ಮೃತದೇಹವನ್ನು ಹಾಕಿ ಆಕೆ ಕಾಣೆಯಾಗಿದ್ದಾಳೆ ಎಂದು ಬಿಂಬಿಸಿ ಸಾಕ್ಷ್ಯ ನಾಶ ಪಡಿಸಲು ಪ್ರಯತ್ನಿಸಿದ್ದು, ಆ ಪ್ರಕಾರ ಕಲಂ 201, 511 ಜೊತೆ 34 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

8. ಎಂಟನೇಯದಾಗಿ, 1 ರಿಂದ 3 ನೇ ಆರೋಪಿತರಾದ ನೀವು ಹೆಚ್ಚಿನ ವರದಕ್ಷಿಣೆಯ ಉದ್ದೇಶದಿಂದ ಮೃತಳು ಮದುವೆಯಾಗಿ ಬಂದ 7 ವರ್ಷದ ಒಳಗಡೆ ಅವಳಿಗೆ ಕಿರುಕುಳವನ್ನು ನೀಡಿ ಸಂಚು ಮಾಡಿ ಆಕೆಯನ್ನು ಕೊಲೆ ಮಾಡಿ ನದಿಯಲ್ಲಿ ಎಸೆದಿದ್ದು, ಆ ಪ್ರಕಾರ ಸದರಿ ಕೊಲೆಯು ವರದಕ್ಷಿಣೆಗಾಗಿ ಮಾಡಿದ ಕೊಲೆಯಾಗಿದ್ದು, ಆ ಪ್ರಕಾರ ಕಲಂ

304 ಬಿ ಜೊತೆ 34ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

9. ಕೊನೆಯದಾಗಿ, ಆರೋಪಿತರಾದ ನೀವೆಲ್ಲರೂ ಮೃತ 5 ನೇ ಆರೋಪಿಯ ಜೊತೆ ಸೇರಿ ಅಲ್ಲದೇ 7 ನೇ ಆರೋಪಿಯ ಪ್ರಚೋದನೆಯ ಮೇರೆಗೆ ಮೃತಳು ಮದುವೆಯಾಗಿ ಬಂದ ಬಳಿಕ ಆಕೆಗೆ ಹೆಚ್ಚಿನ ವರದಕ್ಷಿಣೆ ರೂ.1 ಲಕ್ಷ ತರುವಂತೆ ಕಿರುಕುಳವನ್ನು ನೀಡುತ್ತ ಬಂದಿದ್ದು, ಆ ಪ್ರಕಾರ ಕಲಂ 4 ವರದಕ್ಷಿಣೆ ನಿಶೇಧ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

10. ಇಂದು 04 ನೇ ತಾರೀಖು ಮಾರ್ಚ್ ಮಾಹೆ 2026

( ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ, ತಿಳಿಸಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

SC. No.08/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ಹೊನ್ನಾಳಿ ಪೊಲೀಸ್ ಠಾಣೆ, ಹೊನ್ನಾಳಿ | | ಎ 1) ವೆಂಕಟೇಶ್.ಹೆಚ್.ಪಿ. ಮತ್ತು ಇತರರು |

ಆರೋಪಿಯ ಹೇಳಿಕೆ

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಿನಾಂಕ.04-03-2026 ದಾವಣಗೆರೆ.

| ಆರೋಪಿತರ ಹೆಸರು | ಆರೋಪಿತರ ಸಹಿ |
|---|---|
| ಎ 1) ವೆಂಕಟೇಶ್.ಹೆಚ್.ಪಿ. ತಂದೆ ಹನುಮಂತಪ್ಪ, | |
| ಎ 2) ಹರೀಶ್.ಹೆಚ್.ಪಿ. ತಂದೆ ಹನುಮಂತಪ್ಪ, | |
| ಎ 3) ಗಿರೀಶ್.ಹೆಚ್. ತಂದೆ ಹನುಮಂತಪ್ಪ, | |
| ಎ 4) ಸುನಂದಮ್ಮ ಕೋಂ ಹನುಮಂತಪ್ಪ, | |
| ಎ 6) ಶೋಭ ಕೋಂ ದತ್ತಾತ್ರಿ.ಟಿ., | |
| ಎ 7) ಹಾಲೇಶ.ಹೆಚ್.ಕೆ. ತಂದೆ ಕೃಷ್ಣಪ್ಪ, | |